ಬಟ್ಟೆ ಹಾಕಿಕೊಂಡು ಬರುವುದು, ಬಡವರ ಮಕ್ಕಳು ಹರಕಲು ಬಟ್ಟೆ ಹಾಕಿಕೊಂಡು ಬರುವುದು ಆದರೆ ಅದರಲ್ಲಿ ತಾರತಮ್ಯ ಕಾಣುತ್ತದೆ. ಅವರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಎಲ್ಲರೂ ಸಮಾನರಾಗಬೇಕು ಎನ್ನುವ ಸದುದ್ದೇಶದಿಂದ ಆಗ ಅದನ್ನು ಟೀಕೆ ಮಾಡಿದ್ದು. ಆದರೆ ಅದೊಂದು ಮಹತ್ವಾಕಾಂಕ್ಷೆಯ ಯೋಜನೆ. ಆದರೆ ಈಗ ತಾವು ತರುತ್ತಿರತಕ್ಕಂಥಾದ್ದನ್ನು ನೋಡಿ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಸೋಮಶೇಖರ್‌ರವರ ಬಗ್ಗೆಯಾಗಲೀ ಅಥವಾ ಯಾರೇ ವಿರೋಧ ಪಕ್ಷದ ನಾಯಕರ ಬಗ್ಗೆಯಾಗಲೀ ಅಥವಾ ಆಗ ಮಾಡಿದಂಥ ಕಾರ್ಯಕ್ರಮದ ಬಗ್ಗೆಯಾಗಲೀ ಕೆಟ್ಟ ಭಾವನೆ ಇಲ್ಲ.

ಛೇರ್ಮನ್ : ಮಾನ್ಯ ಯಾವಗಲ್‌ರವರೇ, ನೀವು ಚರ್ಚೆಯನ್ನು ನಾಳೆ ಮುಂದುವರೆಸಿ, ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನ ಪುನಃ ನಾಳೆ ಬೆಳಿಗ್ಗೆ 10.30ಕ್ಕೆ ಸೇರುವುದು.

(ಸದನವು ಸಂಜೆ 7 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 1ನೇ ಆಗಸ್ಟ್ 2003ರ ಶುಕ್ರವಾರದಂದು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

6. ಅನುಬಂಧ – I

ಉತ್ತರ ಕರ್ನಾಟಕ ಪ್ರದೇಶದಲ್ಲಿ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನ

4139 (4918) : ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ಪ್ರದೇಶದಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗಿ ತುಂಬಾ ಆಳವಾಗಿ ಕೊಳವೆಬಾವಿಗಳನ್ನು ಕೊರೆಯಬೇಕಾಗಿರುವುದರಿಂದ ಗಂಗಾ ಕಲ್ಯಾಣ ಯೋಜನೆಗೆ ನಿಗದಿ ಪಡಿಸಿರುವ ಘಟಕವೆಚ್ಚವನ್ನು ಹೆಚ್ಚಿಗೆ ಮಾಡುವುದರ ಬಗ್ಗೆ ಸರ್ಕಾರ ಯೋಚಿಸಿದೆಯೇ;

ಆ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಪ್ರಸ್ತಾಪನೆಯು ರಾಜ್ಯ ಸರ್ಕಾರದ ಪಕ್ರಿಯೆ ಪರಿಶೀಲನೆಯಲ್ಲಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಗುರುತಿಸಿದ ಖನಿಜ ಅನ್ವೇಷಣೆಯ ಮಾಹಿತಿ

4142 (4780) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇಲಾಖೆಯ ಖನಿಜ ಅನ್ವೇಷಣಾ ವಿಭಾಗವು ಶಿವಮೊಗ್ಗ ಜಿಲ್ಲೆಯಲ್ಲಿ ಗುರುತಿಸಿದ ಖನಿಜಗಳು ಯಾವುವು;

ಆ) ಯಾವ ತಾಲ್ಲೂಕಿನ ಯಾವ ಸ್ಥಳಗಳಲ್ಲಿ ಈ ಖನಿಜಗಳನ್ನು ಗುರುತಿಸಲಾಗಿದೆ;

ಇ) ಈ ಗಣಿಗಳ ಗುತ್ತಿಗೆಗಾಗಿ ಬಂದ ಅರ್ಜಿಗಳೆಷ್ಟು; ಮಂಜೂರಾದ ಅರ್ಜಿಗಳ ಸಂಖ್ಯೆ ಎಷ್ಟು;

ಈ) ಈಗಾಗಲೇ ಗುತ್ತಿಗೆ ಕೊಟ್ಟಿರುವಂತಹ ಗಣಿಗಳು ಯಾವುವು: (ಗುತ್ತಿಗೆದಾರರು ಹೆಸರು, ಗಣಿ ವಿವರ ಒದಗಿಸುವುದು):

ಉ) ಇವುಗಳಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯ ಎಷ್ಟು: (ಗಣಿವಾರು ವಿವರ ಒದಗಿಸುವುದು)?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಇಲಾಖೆಯ ಖನಿಜಾನ್ವೇಷಣೆ ವಿಭಾಗವು ಶಿವಮೊಗ್ಗ ಜಿಲ್ಲೆಯಲ್ಲಿ ಚಿನ್ನ, ಕಬ್ಬಿಣ, ಮ್ಯಾಂಗನೀಸ್, ತಾಮ್ರ, ಕ್ರೋಮೈಟ್, ಸುಣ್ಣದ ಕಲ್ಲು, ಡೋಲಮೈಟ್, ಆಸ್‌ಬೆಸ್ಟಾಸ್, ಚೈನಾ ಕ್ಲೇ ಮತ್ತು ಬೆಣಚು ಕಲ್ಲು ಖನಿಜಗಳನ್ನು ಗುರುತಿಸಿದೆ.

ಆ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಲಭ್ಯವಿರುವ ಖನಿಜಗಳಿಗಾಗಿ ಇದುವರೆಗೆ 59 ಗಣಿ ಗುತ್ತಿಗೆ ಅರ್ಜಿಗಳು ಬಂದಿರುತ್ತವೆ. ಅವುಗಳ ಪೈಕಿ, 7 ಅರ್ಜಿದಾರರಿಗೆ ಗಣಿ ಗುತ್ತಿಗೆಗಳನ್ನು ನೀಡಲಾಗಿದೆ.

ಈ) ಈಗಾಗಲೇ ಕೊಟ್ಟಿರುವ ಗಣಿ ಗುತ್ತಿಗೆಗಳ ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಉ) ಇವುಗಳಿಂದ ಸರ್ಕಾರಕ್ಕೆ ವಾರ್ಷಿಕ ರೂ. 19.71 ಲಕ್ಷ ಆದಾಯ ಬರುತ್ತದೆ. ಗಣಿವಾರು ವಿವರ ಅನುಬಂಧ–2ರಲ್ಲಿ ಒದಗಿಸಿದೆ.

ಅನುಬಂಧ–1

ಖನಿಜ	ತಾಲ್ಲೂಕು	ಗ್ರಾಮ
ಚಿನ್ನ	ಹೊನ್ನಾಳಿ	ಕುದುರೆಕೊಂಡ
		ಪಲ್ಲವನಹಳ್ಳಿ
		ಸೂರಹೊನ್ನೆ
		ನ್ಯಾಮ್ತಿ
ಕಬ್ಬಿಣ	ಭದ್ರಾವತಿ	ಲಂಕರ ಗುಡ್ಡ
		ಚಟ್ಟನಹಳ್ಳಿ
		ಕುಂಸಿ
ಮ್ಯಾಂಗನೀಸ್	ಭದ್ರಾವತಿ	ಶಂಕರಗುಡ್ಡ
		ಹೆಗ್ಗನಹಳ್ಳಿ
		ಕುಂಸಿ
		ಮಾರಕಂಡೈ
		ಹೊಸೂರು
		ಬಳ್ಳೂರು
		ಹರಗಹಳ್ಳಿ
		ತುಪ್ಪೂರು
		ಇಟ್ಟಿಗೆ ಹಳ್ಳಿ

ಖನಿಜ	ತಾಲ್ಲೂಕು	ಗ್ರಾಮ
	ತರಿಕೆರೆ	ಸಿದ್ದರಹಳ್ಳಿ
		ಗಂಗೂರು
		ತೋಳದಾಳ್
ತಾಮ್ರ	ಹೊನ್ನಾಳಿ	ಗೋವಿನಕೋವಿ
	ಶಿಕಾರಿಪುರ	ಜಂಬನಿ
	ತರೀಕೆರೆ	ಮಾಸನಿಕೆರೆ
		ಉಬ್ರಾಣಿ
ಕ್ರೋಮೈಟ್	ಭದ್ರಾವತಿ	ಹೊನ್ನಹಳ್ಳಿ
		ಜಂದಮಟ್ಟಿ
		ಅಂಬಲಿಕಟ್ಟೆ
ಸುಣ್ಣಶಿಲೆ	ಭದ್ರಾವತಿ	ಬದಿಗುಂಡ
		ಕುಂಸಿ
		ಬೈಕೋನಹಳ್ಳಿ
		ಶಂಕರಗುಡ್ಡ
		ಕುಂಸಿ
		ಬೈನಕೋನಹಳ್ಳಿ
ಡಾಲೋಮೈಟ್	ಭದ್ರಾವತಿ	ನಿಂಗನಮನೆ
ಚೈನಾ ಕ್ಲೇ	ಸಾಗರ	ಆನಂದಪುರ
	ತೀರ್ಥಹಳ್ಳಿ	ಮೇಳಿಗೆ
		ಬಾಸನಕೋಡಿಗೆ
		ಮಜ್ಜಿಗೇಸರ
		ಕಾಕೋಡ
	ನರಸಿಂಹರಾಜಪುರ	ಗೆರೆಬೈಲೆ
		ದೋರಮಕ್ಕೆ
ಬೆಣಚುಕಲ್ಲು	ಭದ್ರಾವತಿ	ಬಿಳಿಕಲ್ ಬೆಟ್ಟ
		ಎಮ್ಮಿದೊಡ್ಡಿ
	ಸಾಗರ	ಕರಡಿ ಬೆಟ್ಟ

ಅನುಬಂಧ – 2

ಕ್ರ. ಸಂ.	ಗಣಿ ಗುತ್ತಿಗೆದಾರರ ಹೆಸರು	ಎಂ.ಎಲ್ ಸಂಖ್ಯೆ	ಸ್ಥಳ	ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ	ಖನಿಜದ ಹೆಸರು	ರಾಜಧನ ರೂ.ಗಳಲ್ಲಿ
1.	ವಿ.ಐ.ಎಸ್.ಎಲ್	1966	ಬಂಡಿಗುಡ್ಡ	97.12	ಸುಣ್ಣದ ಶಿಲೆ	13,57,240
2.	ವಿ.ಐ.ಎಸ್.ಎಲ್	1910	ಬಿಳಿಕಲ್ ಬೆಟ್ಟ	81.34	ಬಿಳಿ ಬೆಣಚು ಕಲ್ಲು	22,775

ಕ್ರ. ಸಂ.	ಗಣಿ ಗುತ್ತಿಗೆದಾರರ ಹೆಸರು	ಎಂ.ಎಲ್	ಸ್ಥಳ ಸಂಖ್ಯೆ	ವಿಸ್ತೀರ್ಣ	ಖನಿಜದ ಹೆಕ್ಟೇರ್‌ಗಳಲಿರ	ರಾಜಧನ ರೂ.ಗಳಲ್ಲಿ
3.	ಮೈಸೂರು ಮಿನರಲ್ಸ್ ಲಿಮಿಟೆಡ್	1743	ಕರಕೊಡ್ಲು	20.23	ಮ್ಯಾಂಗನೀಸ್	8,900
4.	ಮೈಸೂರು ಮಿನರಲ್ಸ್ ಲಿಮಿಟೆಡ್	1550	ದೇವನಗಿರಿ	6.45	ಚೈನಾಕ್ಲೇ	5,59,050
5.	ಮೈಸೂರು ಮಿನರಲ್ಸ್ ಲಿಮಿಟೆಡ್	732	ನಾಗದೇವಹಳ್ಳಿ	27.52	ಚೈನಾಕ್ಲೇ	5,504
6.	ಎನ್. ಪಿ. ಭೋಜರಾಜ್	2259	ಹೊನ್ನೆಬಾಗಿ	1.50	ಪಸಿರು ಬೆಣಚು ಕಲ್ಲು	1,050
7.	ಹೆಚ್. ಜಗದೀಶ್	1964	ಕೆಂಗಟ್ಟೆ	16.91	ಬಿಳಿ ಬೆಣಚು ಕಲ್ಲು	17,040

ರಾಜ್ಯದಲ್ಲಿ ಪಶು ಚಿಕಿತ್ಸೆಗೆ ಶುಲ್ಕ ವಿನಾಯಿತಿ ನೀಡುವ ಬಗ್ಗೆ

4143 (4781) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಆಸ್ಪತ್ರೆಗಳಲ್ಲಿ ಸೇವಾ ಶುಲ್ಕ ವಿಧಿಸಲು ಸರ್ಕಾರ ತೀರ್ಮಾನಿಸಿದೆಯೇ: ಹಾಗಿದ್ದರೆ, ಚಿಕಿತ್ಸೆಗೆ ನಿಗದಿಪಡಿಸಿರುವ ದರಗಳೇನು:

ಆ) ಈ ಸೇವಾ ಶುಲ್ಕ ನಗರಪಾಲಿಕೆ ಮತ್ತು ಪುರಸಭೆ ವ್ಯಾಪ್ತಿಗೆ ಮಾತ್ರ ಮಿತಿಗೊಳಿಸಲಾಗುವುದೇ:

ಇ) ಪುರಸಭೆ ಸಮೀಪವಿರುವ ಗ್ರಾಮಾಂತರ ಪ್ರದೇಶದ ರೈತರಿಗೆ ಆಸ್ಪತ್ರೆ ಸೌಲಭ್ಯವಿಲ್ಲದಿದ್ದಲ್ಲಿ ಈ ಶುಲ್ಕ ಭರಿಸುವುದು ಅಸಾಧ್ಯ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಪುರಸಭೆ ವ್ಯಾಪ್ತಿ ಆಸ್ಪತ್ರೆಗಳಲ್ಲಿ ರೈತರಿಗೆ ಶುಲ್ಕವಿನಾಯಿತಿ ನೀಡಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ನಗರ ಪ್ರದೇಶಗಳಲ್ಲಿ ವಿಧಿಸಲಾಗಿದ್ದ ಸೇವಾ ಶುಲ್ಕವನ್ನು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21.7.2003ರಲ್ಲಿ ಹಿಂದಕ್ಕೆ ಪಡೆಯಲಾಗಿದೆ.

ಆ) ಮೇಲ್ಕಂಡಂತೆ ಹಿಂಪಡೆಯಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ಕಾಗದ ಕಾರ್ಖಾನೆಯ ಅರಣ್ಯ ವಿಭಾಗದಲ್ಲಿ ಖಾಯಂಗೊಳ್ಳದಿರುವ ನೌಕರರ ಬಗ್ಗೆ

4144 (4782) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಕಾಗದ ಕಾರ್ಖಾನೆಯ (ಎಂಪಿಎಂ) ಅರಣ್ಯ ವಿಭಾಗದಲ್ಲಿ ಮಾಚರ್, ಟ್ರೈವರ್ ಇತ್ಯಾದಿ ಹುದ್ದೆಗಳಲ್ಲಿ ಖಾಯಂ ಗೊಳ್ಳದೆ ನೌಕರರ ಸಂಖ್ಯೆ ಎಷ್ಟು;

ಆ) ಯಾವ ಸಾಲಿನಿಂದ ಎಷ್ಟು ಜನ ಈ ನೌಕರರು ಕೆಲಸ ಮಾಡುತ್ತಿದ್ದಾರೆ: